ವಿಷಯ : ಡೀಸಲ್ ಸರಬರಾಜು ಬಗ್ಗೆ ಪಡಿತರ ಪದ್ಧತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 776 (1258)

ಶ್ರೀ ಎಂ. ಎಸ್. ಆತ್ಮಾನಂದ (ಮಂಡ್ಯ) :– ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ರಾಜ್ಯದಲ್ಲಿ ಡೀಸೆಲ್ ಕೊರತೆ ನಿವಾರಿಸಲು ಸರ್ಕಾರದವರು ಕೈಗೊಂಡ ಕ್ರಮವೇನು ?

2) ಡೀಸೆಲ್ ಸರಬರಾಜಿನ ಬಗ್ಗೆ ಪಡಿತರ ಪದ್ಧತಿ ಜಾರಿಗೆ ತರಲು ಸರ್ಕಾರ ಉದ್ದೇಶಿಸಲಾಗಿದೆಯೇ ?

3) ಹಾಗಿದ್ದಲ್ಲಿ ಎಂದಿನಿಂದ ಜಾರಿಗೆ ತರಲಾಗುವುದು ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :–

1) ಕೇಂದ್ರ ಸರ್ಕಾರದವರು ದಿನಾಂಕ 1–11–90 ರಿಂದ ವಿಧಿಸಿದ್ದ ಶೇಕಡ 10ರ ಡೀಸೆಲ್ ಹಂಚಿಕೆಯ ಕಡಿತವನ್ನು ಇತ್ತೀಚೆಗೆ ಹಿಂತೆಗೆದುಕೊಂಡಿರುತ್ತಾರೆ. ಇದರಿಂದ ಡಿಸೆಂಬರ್ 90ರ ಮಾಹೆಗೆ ಸುಮಾರು16,000 ಕೆ.ಎಲ್. ಡೀಸೆಲ್‌ನ್ನು ಹೆಚ್ಚುವರಿಯಾಗಿ ಬಿಡುಗಡೆ ಮಾಡಿರುತ್ತಾರೆ. ಇದರಿಂದ ಡೀಸೆಲ್‌ನ ಅಭಾವ ಸ್ವಲ್ಪ ಮಟ್ಟಿಗೆ ಸುಧಾರಿಸಿದೆ. ಇದರ ಜೊತೆಗೆ 1) ರೈತರಿಗೆ ಅವಶ್ಯಕವಾಗಿ ವ್ಯವಸಾಯಕ್ಕೆ ಮತ್ತು ಕಬ್ಬನ್ನು ಸಕ್ಕರೆ ಕಾರ್ಖಾನೆಗಳಿಗೆ ಒದಗಿಸಲು 2) ಅಗತ್ಯ ವಸ್ತುಗಳ ಸಾಗಾಣಿಕೆ, ಜಲಮಂಡಳಿ, ಆಸ್ಪತ್ರೆಗಳು, ನರ್ಸಿಂಗ್‌ಹೋಂಗಳು ಇವೇ ಮುಂತಾದ ಅಗತ್ಯ ಸೇವೆಗಳ ಸಂಸ್ಥೆಗಳು ಹಾಗೂ 3) ಕೈಗಾರಿಕೆಗಳಿಗೆ ಹಾಗು ಮೀನುಗಾರಿಕೆಗೆ ಆದ್ಯತೆ ನೀಡಿ ಪರವಾನಗಿ ಮೂಲಕ ವ್ಯವಸ್ಥಿತವಾಗಿ ಡೀಸೆಲ್ ಸರಬರಾಜು ಮಾಡಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಿದೆ. ವಿತರಣಾ ವ್ಯವಸ್ಥೆಯನ್ನು ಮತ್ತಷ್ಟು ಉತ್ತಮಗೊಳಿಸಲು ಸರ್ಕಾರವು ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವುದು.

2) ಇಲ್ಲ.

3) ಉದ್ಭವಿಸುವುದಿಲ್ಲ.

ವಿಷಯ :– ಟಿ. ದಾಸರಹಳ್ಳಿಯನ್ನು ಇನ್‌ಪರ್‌ಮಲ್ ಏರಿಯಾ ಎಂದು ಪರಿಗಣಿಸುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 777 (1056)

ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ) :– ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಟಿ. ದಾಸರಹಳ್ಳಿಯ ಅರ್ಧಭಾಗವನ್ನು ಇನ್‌ಪರ್‌ಮಲ್ ರೇಷನ್ ಏರಿಯಾ ಎಂದು ಉಳಿದ ಅರ್ಧ ಭಾಗವನ್ನು ಗ್ರಾಮಾಂತರ ಪ್ರದೇಶವೆಂದು ಪರಿಗಣಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಟಿ. ದಾಸರಹಳ್ಳಿಯನ್ನು ಪೂರ್ಣವಾಗಿ ಇನ್‌ಪರ್‌ಮಲ್ ರೇಷನ್ ಏರಿಯಾ ಎಂದು ಪರಿಗಣಿಸಲು ಮನವಿಗಳೇನಾದರೂ ಬಂದಿದೆಯೇ ? ಹಾಗಿದ್ದಲ್ಲಿ ಇದರ ಬಗ್ಗೆ ಕ್ರಮ ಕೈಗೊಳ್ಳಲಾಗುವುದೇ ? ಹಾಗಿದ್ದಲ್ಲಿ ಯಾವಾಗ ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :–

ಅ) ಟಿ. ದಾಸರಹಳ್ಳಿ ಪೂರ್ಣವಾಗಿ ಗ್ರಾಮಾಂತರ ಪ್ರದೇಶದಲ್ಲಿರುತ್ತದೆ.

ಆ) ಟಿ. ದಾಸರಹಳ್ಳಿಯು ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಬರುವುದಾಗಿ ತಿಳಿಸಿ ಅದನ್ನು ಪಟ್ಟಣ ಪ್ರದೇಶವೆಂದು ಪರಿಗಣಿಸಲು ಮನವಿ ಬಂದಿರುತ್ತದೆ. ಈ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.